# ಉದ್ದೇಶ :

### ತೃತೀಯ ಪಕ್ಷದ ನಡವಳಿಕೆಯ ನೀತಿ ಸಂಹಿತೆ :

ಪೇಚೆಕ್ಸ್ ನ ಕಂಪನಿಯವರು ಅವರ ಜೊತೆಗೆ ವ್ಯವಹಾರ ನಡೆಸುವ ತೃತೀಯ ಪಕ್ಷಗಳಿಂದ ಈ ಕೆಳಕಂಡಂತಹ ವಿಷಯಗಳನ್ನು ನಿರೀಕ್ಷಿಸುತ್ತದೆ.

"ತೃತೀಯ ಪಕ್ಷ" ಎಂದರೆ, ಗ್ರಾಹಕರನ್ನು ಹೊರತುಪಡಿಸಿ, ಪೇಚೆಕ್ಸ್ ಜೊತೆ ವ್ಯವಹಾರ ಸಂಬಂಧವನ್ನು ಹೊಂದಿರುವ ಯಾವುದೇ ಪಕ್ಷ, ತೃತೀಯ ಪಕ್ಷಗಳಲ್ಲಿ ಜಂಟಿ ಉದ್ಯಮ ಪಾಲುದಾರರು, ಕನ್ಸಾರ್ಷಿಯಂ ಪಾಲುದಾರರು, ಗುತ್ತಿಗೆದಾರರು, ಸಲಹೆಗಾರರು, ಸರಬರಾಜುದಾರರು, ಮಾರಾಟಗಾರರು, ಸೇವಾ ಪೂರೈಕೆದಾರರು, ಏಜೆಂಟ್‌ಗಳು, ಮಧ್ಯವರ್ತಿಗಳು, ವಿತರಕರು ಅಥವ ಮರುಮಾರಾಟಗಾರರು ಇದರಲ್ಲಿ ಒಳಗೊಂಡಿರುತ್ತಾರೆ.

ಈ ಸಂಹಿತೆಯು ಮಾನವ ಹಕ್ಕುಗಳ ವಿಶ್ವ ಘೋಷಣಾ ಪತ್ರಿಕೆ ಮತ್ತು ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಮೂಲಭೂತ ಸಮಾವೇಶಗಳಿಂದ ಮಾರ್ಗದರ್ಶನವನ್ನು ಪಡೆಯುತ್ತದೆ.

ಪೇಚೆಕ್ಸ್ ಕಂಪನಿಯು ತನ್ನ ತೃತೀಯ ಪಕ್ಷಗಳಿಂದ ಅವರ ಕಾರ್ಯಾಚರಣೆಗಳನ್ನು ಎಲ್ಲಾ ಅನ್ವಯವಾಗುವ ವೃತ್ತಿಪರ ಮಾನದಂಡಗಳು, ಕಾನೂನುಬದ್ಧ ಅವಶ್ಯಕತೆಗಳು, ಪೇಚೆಕ್ಸ್ ವ್ಯವಹಾರ ನೈತಿಕತೆ ಮತ್ತು ಈ ಸಂಹಿತೆಯ ಪ್ರಕಾರ ನಡೆಸುವಂತೆ ನಿರೀಕ್ಷಿಸುತ್ತದೆ. ಪೇಚೆಕ್ಸ್ ಕಂಪನಿಯೊಡನೆ ತೃತೀಯ ಪಕ್ಷದವರು ಮಾಡಿಕೊಂಡಿರುವ ಯಾವುದೇ ನಿಬಂಧನೆಗಳಿಗೆ ಈ ನೀತಿಸಂಹಿತೆಯಲ್ಲಿ ತದ್ವಿರುದ್ಧವಾಗಿದ್ದರೆ, ಒಪ್ಪಂದದಲ್ಲಿರುವ ನಿಬಂಧನೆಗಳನ್ನು ಪರಿಗಣಿಸಲಾಗುತ್ತದೆ.

ಪೇಚೆಕ್ಸ್ ಜೊತೆಗಿನ ಒಪ್ಪಂದದಲ್ಲಿನ ಅನ್ವಯವಾಗುವ ಷರತ್ತುಗಳು ಈ ಸಂಹಿತೆಯ ಯಾವುದೇ ವಿರೋಧಾಭಾಸದ ಉಪಬಂಧಗಳಿಂತಲೂ ಮೇಲುಗೈಯನ್ನು ಸಾಧಿಸುತ್ತವೆ.

### ಪರಿಸರಕ್ಕೆ ಗೌರವವನ್ನು ಸಲ್ಲಿಸುವುದು :

ಪೇಚೆಕ್ಸ್ ಪರಿಸರದ ಬಗ್ಗೆ ಜಾಗೃತಿಯುಳ್ಳ ಮತ್ತು ತಮ್ಮ ಉತ್ಪನ್ನಗಳು ಅಥವ ಸೇವೆಗಳ ಪರಿಸರದ ಮೇಲೆ ಬರುವ ಪರಿಣಾಮವನ್ನು ಕಡಿಮೆಗೊಳಿಸಲು ಪ್ರಯತ್ನಿಸುವ ತೃತೀಯ ಪಕ್ಷಗಳೊಂದಿಗೆ ಕಾರ್ಯವನ್ನು ನಿರ್ವಹಿಸಲು ಬಯಸುತ್ತದೆ.

ಪೇಚೆಕ್ಸ್ ನ ಜೊತೆಗೆ ವ್ಯವಹರಿಸುವ ತೃತೀಯ ಪಕ್ಷಗಳು ಎಲ್ಲಾ ಅನ್ವಯವಾಗುವ ಪರಿಸರ ಕಾನೂನುಗಳು ಮತ್ತು ನಿಯಮಗಳನ್ನು ಪಾಲಿಸಬೇಕು;

ಅಪಘಾತ, ಮರಣ, ಅಥವ ಆಸ್ತಿ ಮತ್ತು ಪರಿಸರಕ್ಕೆ ಹಾನಿಯನ್ನು ಕಡಿಮೆಗೊಳಿಸಲು ಸುರಕ್ಷಿತಾ ಕ್ರಮಗಳನ್ನು ದಾಖಲೆ ಮಾಡಬೇಕು. ಮತ್ತು ಪ್ರಕಟಿಸಬೇಕು;

ತಮ್ಮ ಕಾರ್ಯಾಚರಣೆಗಳಿಂದ ಉಂಟಾಗುವ ಯಾವುದೇ ಪರಿಸರದ ಪರಿಣಾಮಗಳನ್ನು ತಡೆಯಲು ಚುರುಕಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕು;

ಪರಿಸರದ ಹೊಣೆಗಾರಿಕೆಯನ್ನು ಉತ್ತೇಜಿಸಬೇಕು;

ಪೂರೈಕೆ ಸರಪಳಿಯಲ್ಲಿ ಪರಿಸರ ನಿರ್ವಹಣೆಯ ಆಡಿಟ್ ಗಳನ್ನು ಮಾಡಿಸಬೇಕು;

ಮತ್ತು ಸುಸ್ಥಿರ ಅಭಿವೃದ್ಧಿ ಹಾಗು ಪರಿಸರ ಸ್ನೇಹಿ ತಂತ್ರಜ್ಞಾನಗಳ ಅಭಿವೃದ್ಧಿಯನ್ನು ಉತ್ತೇಜಿಸಬೇಕು.

ಪೇಚೆಕ್ಸ್ ರವರು ತಮ್ಮ ವೆಚ್ಚ ನಿರ್ವಹಣೆಯ ನಿರ್ಧಾರಗಳಲ್ಲಿ ಉತ್ಪನ್ನಗಳು ಮತ್ತು ಸೇವೆಗಳ ಸಂಗ್ರಹಣೆ, ಖರೀದಿ ಮತ್ತು ಸಂಪೂರ್ಣ ಉತ್ಪನ್ನಗಳ ಶಾಶ್ವತತೆ ಪರಿಸರದಲ್ಲಿನ ಅಂಶಗಳನ್ನು ಪರಿಗಣಿಸುತ್ತದೆ.

**ನೈತಿಕ ವ್ಯವಹಾರ ಪದ್ಧತಿಗಳು :**

ಪೇಚೆಕ್ಸ್ ನ ಅಭಿಪ್ರಾಯದಲ್ಲಿ, ಸರಿಯಾದ **ಭ್ರಷ್ಟಾಚಾರ ವಿರೋಧಿ, ಕಾರ್ಮಿಕ ಮತ್ತು ಮಾನವ ಹಕ್ಕುಗಳ ಪದ್ಧತಿಗಳು** ನಮ್ಮ ಗ್ರಾಹಕರು, ಹೂಡಿಕೆದಾರರು, ನೌಕರರು, ಪಾಲುದಾರರು ಮತ್ತು ಸಮುದಾಯಗಳ ಹಿತಾಸಕ್ತಿಗೆ ಇವು ಅತ್ಯಂತ ಅವಶ್ಯಕ.

**ಲಂಚ ಹಾಗು ಭ್ರಷ್ಟಾಚಾರ ವಿರೋಧ :**

ಭ್ರಷ್ಟಾಚಾರ ವಿರೋಧಿ ನಿಯಮಗಳು ಮತ್ತು ನೈತಿಕತೆಗಳನ್ನು ಬೆಂಬಲಿಸಲು ಪೇಚೆಕ್ಸ್ ತೃತೀಯ ಪಕ್ಷಗಳು ನೇರವಾಗಿ ಅಥವ ಪರೋಕ್ಷವಾಗಿ **ಹಣ, ಹೆಚ್ಚಿನ ಮೌಲ್ಯದ ಉಡುಗೊರೆಗಳು, ಅಥವ ಇತರೆ ಪರಿಹಾರಗಳನ್ನು ಪೇಚೆಕ್ಸ್ ಅಥವ ಅದರ ನೌಕರರಿಗೆ ನೀಡುವಂತಿಲ್ಲ.**

ಪೇಚೆಕ್ಸ್ ನಲ್ಲಿ ಕೆಲಸ ಮಾಡುವ ಉದ್ದೇಶದಿಂದ, ಕಂಪನಿಯ ಪರವಾಗಿ ರಾಜಕೀಯ ಪ್ರಚಾರಗಳಿಗೆ ಪಾವತಿ ಅಥವ ದೇಣಿಗೆ ನೀಡುವುದು, ಪೇಚೆಕ್ಸ್ ನ ವ್ಯವಹಾರ ನಿರ್ಧಾರಗಳ ಮೇಲೆ ಪ್ರಭಾವವನ್ನು ಬೀರುವ ಪ್ರಯತ್ನ ಮಾಡುವುದು, ಅಥವ ಪೇಚೆಕ್ಸ್ ಜೊತೆಗೆ ವ್ಯವಹಾರ ಮಾಡಲು ಅವಕಾಶಗಳನ್ನು ಹೆಚ್ಚಿಸಲು ಪ್ರಯತ್ನಿಸುವುದು ನಿಷೇಧವಾಗಿದೆ.

ಎಲ್ಲಾ ತೃತೀಯ ಪಕ್ಷಗಳು **ಅಮೇರಿಕಾ ವಿದೇಶಿ ಭ್ರಷ್ಟಾಚಾರ ತಡೆ ಕಾಯಿದೆ (ಯು.ಎಸ್. ಫಾರಿನ್ ಕರೆಪ್ಟ್ ಪ್ರಾಕ್ಟೀಸಸ್ ಆಕ್ಟ್)** ಸೇರಿ ಅನ್ವಯವಾಗುವ ಎಲ್ಲಾ ಭ್ರಷ್ಟಾಚಾರ ವಿರೋಧಿ ಕಾನೂನುಗಳು ಮತ್ತು ನಿಯಮಗಳನ್ನು ಪಾಲಿಸಬೇಕು.

**ವಂಚನೆ, ವ್ಯರ್ಥತೆ, ಮತ್ತು ದುರುಪಯೋಗ :**

ಪೇಚೆಕ್ಸ್ ತನ್ನ ಮಾರಾಟಗಾರರು, ಗುತ್ತಿಗೆದಾರರು ಮತ್ತು ಇತರೆ ತೃತೀಯ ಪಕ್ಷಗಳು ತಮ್ಮ ಕಾರ್ಯಾಚರಣೆಗಳನ್ನು **ಅತ್ಯುನ್ನತ ನೈತಿಕ ಮಾನದಂಡಗಳೊಂದಿಗೆ ನಡೆಸಬೇಕು** ಎಂದು ನಿರೀಕ್ಷಿಸುತ್ತದೆ.

ಅವರಿಗೆ ಅನ್ವಯವಾಗುವ ಎಲ್ಲಾ ಕಾನೂನುಗಳನ್ನು ಮತ್ತು ನಿಯಮಗಳನ್ನು ಪಾಲಿಸಬೇಕು ಮತ್ತು **ವಂಚನೆ, ವ್ಯರ್ಥತೆ ಅಥವ ದುರುಪಯೋಗದ ಯಾವುದೇ ಘಟನೆಗಳನ್ನು ತಡೆಯಲು, ಪತ್ತೆಹಚ್ಚಲು ಮತ್ತು ವರದಿ ಮಾಡಲು** ಸಕ್ರಿಯವಾಗಿ ಕೆಲಸ ಮಾಡಬೇಕು.

**ಇದರಲ್ಲಿಗೆ :**

- ಸರಿಯಾದ ಮಾಹಿತಿಯನ್ನು ಒದಗಿಸುವುದು,
- ಲಂಚ ಅಥವ ಅಕ್ರಮ ಕಮೀಷನ್‌ಗಳಲ್ಲಿ ತೊಡಗಿಸಿಕೊಳ್ಳದಿರುವುದು,
- ಶಂಕಿತ ಎಫ್.ಡಬ್ಲ್ಯೂ.ಎ. ಚಟುವಟಿಕೆಗಳನ್ನು ತಕ್ಷಣವೇ ಕಂಪನಿಯ ಅನುಗುಣಿತಾ ವಿಭಾಗಕ್ಕೆ ವರದಿ ಮಾಡುವುದು ಒಳಗೊಂಡಿವೆ.

ಅನುಸರಿಸಲು ವಿಫಲವಾದರೇ, ಒಪ್ಪಂದವನ್ನು ರದ್ದುಗೊಳಿಸಲಾಗಬಹುದು.

**ಹಣದ ಅಕ್ರಮ ಚಲಾವಣೆಯ ವಿರೋಧ :**

ಪೇಚೆಕ್ಸ್ ತೃತೀಯ ಪಕ್ಷಗಳು ಅನ್ವಯವಾಗುವ ಎಲ್ಲಾ ಹಣ ಅಕ್ರಮ ಚಲಾವಣೆ ವಿರೋಧಿ ಕಾನೂನುಗಳು ಮತ್ತು ನಿಯಮಗಳನ್ನು ಪಾಲಿಸಬೇಕು.

**ಆಂತರಿಕ ವಹಿವಾಟು :**

ಪೇಚೆಕ್ಸ್ ತೃತೀಯ ಪಕ್ಷಗಳು **ಆಂತರಿಕ ವಹಿವಾಟು ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.**

ಪೇಚೆಕ್ಸ್ ನ ಬಗ್ಗೆ ಸಾರ್ವಜನಿಕವಾಗಿ ಲಭ್ಯವಿಲ್ಲದ, ಪ್ರಮುಖ ಮಾಹಿತಿಯನ್ನು ಹೊಂದಿರುವ ತೃತೀಯ ಪಕ್ಷಗಳು :

೧. ಷೇರುಗಳು ಅಥವ ಇತರೆ ಮೌಲ್ಯ ಪತ್ರಗಳನ್ನು ಖರೀದಿಸುವುದು, ಮಾರಾಟ ಮಾಡುವುದು ಅಥವ ವ್ಯಾಪಾರ ನಡೆಸುವುದು ನಿಷೇಧಿತವಾಗಿದೆ.

೨. ಇತರರಿಗೆ ಮಾಹಿತಿ ನೀಡಿ ಅವರು ವ್ಯವಹಾರ ನಡೆಸುವಂತೆ ಮಾಡುವುದೂ ಕೂಡ ನಿಷೇಧಿತವಾಗಿದೆ.

**ಹಿತಾಸಕ್ತಿ ಸಂಘರ್ಷ :**

ಯಾವುದೇ ಪೇಚೆಕ್ಸ್ ತೃತೀಯ ಪಕ್ಷದ ಖಾಸಗಿ ಹಿತಾಸಕ್ತಿಗಳು ಪೇಚೆಕ್ಸ್‌ನ ಒಟ್ಟು ಹಿತಾಸಕ್ತಿಗಳ ವಿರುದ್ಧ ಬಂದರೆ, ಅದನ್ನು **ಹಿತಾಸಕ್ತಿ ಸಂಘರ್ಷ** ಎಂದು ಕರೆಯಲಾಗುತ್ತದೆ.

ತೃತೀಯ ಪಕ್ಷಗಳು ಪೇಚೆಕ್ಸ್ ಜೊತೆಗಿನ ಸಂಬಂಧ ಆರಂಭಿಸುವ ಮೊದಲು ಅಥವ ಸಂಬಂಧ ಆರಂಭವಾದ ನಂತರ ಸಂಘರ್ಷ ಉಂಟಾದ ತಕ್ಷಣ ಅದನ್ನು ಬಹಿರಂಗಪಡಿಸುವ ನಿರೀಕ್ಷೆ ಇರುತ್ತದೆ.

**ಗೌಪ್ಯತೆ ಮತ್ತು ಡೇಟಾ ಸಂರಕ್ಷಣೆ :**

ಪೇಚೆಕ್ಸ್ ತೃತೀಯ ಪಕ್ಷಗಳು ಗೌಪ್ಯತೆ ಮತ್ತು ಮಾಹಿತಿ ಭದ್ರತೆಗೆ ಸಂಬಂಧಿಸಿದ ಎಲ್ಲಾ ಕಾನೂನುಗಳು ಮತ್ತು ನಿಯಂತ್ರಣ ಅವಶ್ಯಕತೆಗಳನ್ನು ಪಾಲಿಸಬೇಕು. ಪೇಚೆಕ್ಸ್ ಹಾಗು ಅದರ ಗ್ರಾಹಕರ ಅಥವ ಪೇಚೆಕ್ಸ್ ವ್ಯವಹಾರ ನಡೆಸುವ ಇತರರ ಎಲ್ಲಾ ರಹಸ್ಯ ಮಾಹಿತಿಯನ್ನು ರಕ್ಷಿಸಲು ಸೂಕ್ತ ನಿಯಂತ್ರಣಗಳನ್ನು ಹೊಂದಿರಬೇಕು.

**ಕೃತಕ ಬುದ್ಧಿಮತ್ತೆ (ಎ.ಐ.) :**

ಪೇಚೆಕ್ಸ್ ಮೂರನೇ ಪಕ್ಷಗಳು ಕೃತಕ ಬುದ್ಧಿಮತ್ತೆಯ ಪರಿಹಾರಗಳು, ವ್ಯವಸ್ಥೆಗಳು ಮತ್ತು/ಅಥವ ಅಪ್ಲಿಕೇಷನ್‌ಗಳನ್ನು ಅತಿ ಉನ್ನತ ನೈತಿಕ ಮಾನದಂಡಗಳಿಗೆ ಅನುಗುಣವಾಗಿ

ಅಭಿವೃದ್ಧಿಪಡಿಸಿ ಜಾರಿಗೆ ತರಬೇಕು. ಇದರಲ್ಲಿ ನ್ಯಾಯಸಮ್ಮತತೆ, ಪಾರದರ್ಶಕತೆ, ಮಾನ್ಯತೆ, ಹೊಣೆಗಾರಿಕೆ, ನಿಯಂತ್ರಣ ಪಾಲನೆ ಹಾಗು ಗೌಪ್ಯತಾ ರಕ್ಷಣೆ ಸೇರಿವೆ. ಕೃತಕ ಬುದ್ಧಿಮತ್ತೆಯ ಬಳಕೆಗೆ ಸಂಬಂಧಿಸಿದ ಯಾವುದೇ ಸಮಸ್ಯೆ ಅಥವ ಆತಂಕವನ್ನು ತಕ್ಷಣ ವರದಿ ಮಾಡಬೇಕು.

**ಕಂಪನಿಯ ಆಸ್ತಿ :**

ತೃತೀಯ ಪಕ್ಷಗಳಿಗೆ ಪೇಚೆಕ್ಸ್ ಆಸ್ತಿಯ ಪ್ರವೇಶ ದೊರೆಯಬಹುದು. ಅವರು ಆ ಆಸ್ತಿಯನ್ನು ಹೊಣೆಗಾರಿಕೆಯಿಂದ, ಕೇವಲ ಅನುಮೋದಿತ ವ್ಯವಹಾರ ಉದ್ದೇಶಗಳಿಗಾಗಿ ಬಳಸಬೇಕು. ಪೇಚೆಕ್ಸ್ ಆಸ್ತಿಯಲ್ಲಿಗೆ ಹಾರ್ಡ್‌ವೇರ್, ಸಾಫ್ಟ್‌ವೇರ್, ವೆಬ್‌ಸೈಟ್‌ಗಳು, ಇಮೇಲ್, ದೂರಸಂಪರ್ಕ, ಇಂಟರ್ನೆಟ್ ಪ್ರವೇಶ, ದಾಖಲೆಗಳು, ಸರಕುಗಳು ಮತ್ತು ಬೌದ್ಧಿಕ ಆಸ್ತಿಗಳನ್ನು ಒಳಗೊಂಡಿರುತ್ತವೆ. ಯೋಜನೆಯು ಪೂರ್ಣಗೊಳ್ಳುವಾಗ ಎಲ್ಲಾ ಪೇಚೆಕ್ಸ್ ಆಸ್ತಿಯನ್ನು ಹಿಂದಿರುಗಿಸಬೇಕು. ಪೇಚೆಕ್ಸ್ ಹೆಸರನ್ನು, ವ್ಯಾಪಾರ ಚಿಹ್ನೆಯನ್ನು ಅಥವ ಲೋಗೋವನ್ನು ಪೇಚೆಕ್ಸ್ ಅನುಮತಿಯಿಲ್ಲದೆ ಬಳಸಲು ಬಿಡುವುದಿಲ್ಲ.

**ಮಾನವ ಹಕ್ಕುಗಳು :**

ನಾವು ನಮ್ಮ ತೃತೀಯ ಪಕ್ಷಗಳಿಂದ ಪೇಚೆಕ್ಸ್ ಮಾನವ ಹಕ್ಕುಗಳು ಮತ್ತು ವೃತ್ತಿಪರ ಆರೋಗ್ಯ ಹಾಗು ಸುರಕ್ಷತಾ ನೀತಿಗಳನ್ನು ಪಾಲಿಸಲು ನಿರೀಕ್ಷಿಸುತ್ತೇವೆ. ಇದರಲ್ಲಿ ವೇತನ ಮತ್ತು ಕೆಲಸದ ಗಂಟೆಗಳು, ಸಮೂಹ ಮಾತುಕತೆಗಳಿಗೆ ಸಂಬಂಧಿಸಿದ ಎಲ್ಲಾ ಉದ್ಯೋಗ ಕಾನೂನುಗಳ ಪಾಲನೆಯು ಇದರಲ್ಲಿ ಸೇರಿವೆ. ಬಾಲ ಕಾರ್ಮಿಕರು ಅಥವ ಬಲವಂತದ ಕಾರ್ಮಿಕರನ್ನು ಬಳಸುವುದನ್ನು ತಡೆಯಬೇಕು. ಸಂಘಟನೆಯ ಸ್ವಾತಂತ್ರವನ್ನು ಉತ್ತೇಜಿಸಬೇಕು. ಕೆಲಸದ ಸ್ಥಳದಲ್ಲಿ ಬೇಧಭಾವ, ಹಿಂಸೆ, ದೌರ್ಜನ್ಯ ಹಾಗು ಕಿರುಕುಳಗಳನ್ನು ತಡೆಯುವ ನೀತಿಗಳನ್ನು ಹೊಂದಿರಬೇಕು.

**ಒಳಗೊಳ್ಳುವಿಕೆ ಮತ್ತು ವೈವಿಧ್ಯತೆಯನ್ನು ಮೌಲ್ಯಮಾಪನ ಮಾಡುವುದು :**

ಪೇಚೆಕ್ಸ್ ನಂಬಿಕೆ, ಜನರು ಮತ್ತು ಆಲೋಚನೆಗಳ ಸಮನ್ವಯತೆಯ ಸೃಜನಶೀಲತೆಯನ್ನು ಉತ್ತೇಜಿಸುತ್ತದೆ ಮತ್ತು ಪೇಚೆಕ್ಸ್ ಕಂಪನಿಯನ್ನು ಬಲಿಷ್ಠ ಸಂಸ್ಥೆಯನ್ನಾಗಿಸಲು ಇವು ಸಹಾಯಕವಾಗಿವೆ. ಆದ್ದರಿಂದ ಪೇಚೆಕ್ಸ್ ಎಲ್ಲಾ ಆಯಾಮಗಳ ವೈವಿಧ್ಯತೆಯನ್ನು ಸ್ವೀಕರಿಸುವ, ಗೌರವಿಸುವ ಮತ್ತು ಬಳಸುವ ಒಳಗೊಳ್ಳುವಿಕೆಯಿಂದ ಕೂಡಿದ ವಾತಾವರಣವನ್ನು ಉತ್ತೇಜಿಸುತ್ತದೆ. ತೃತೀಯ ಪಕ್ಷಗಳು ತಮ್ಮ ಕಾರ್ಯಾಚರಣೆ ಮತ್ತು ಸರಕು ಸರಪಳಿಯಲ್ಲಿ ವೈವಿಧ್ಯತೆ ಮತ್ತು ಒಳಗೊಳ್ಳುವಿಕೆಯ ನೀತಿಗಳನ್ನು ಅಳವಡಿಸಬೇಕು.

**ಸರಕು ಸರಪಳಿಗಳ ಪರಿಶೀಲನೆಗಳು :**

ಪೇಚೆಕ್ಸ್ ತನ್ನ ತೃತೀಯ ಪಕ್ಷಗಳ ಈ ನೀತಿ ಸಂಹಿತೆಯ ಪಾಲನೆಯನ್ನು ಪರಿಶೀಲಿಸಲು ಹಕ್ಕನ್ನು ಹೊಂದಿರುತ್ತದೆ. ಇದರಲ್ಲಿ ಪರಿಸರ, ಸರಕು ಸರಪಳಿ, ಕಾರ್ಮಿಕ ಪದ್ಧತಿಗಳು ಹಾಗು ಇತರೆ ವ್ಯವಹಾರ ಪದ್ಧತಿಗಳನ್ನು ಪರಿಶೀಲನೆಗೆ ಒಳಪಡಿಸುವುದು ಸೇರಿವೆ. ಈ ನೀತಿ

ಸಂಹಿತೆಯ ಅನ್ವಯ, ಆಗಾಗ ಸ್ಥಳ ಪರಿಶೀಲನೆಗಳನ್ನೂ ಸಹ ಪೂರ್ವ (ಮುಂಚಿತವಾಗಿ) ಸೂಚನೆಯನ್ನು (ನೋಟೀಸ್) ನೀಡಿ ನಡೆಸಬಹುದಾಗಿದೆ.

**ಕೆಲಸದ ಸ್ಥಳದ ಸುರಕ್ಷತೆ ಮತ್ತು ಆರೋಗ್ಯ :**

ಪೇಚೆಕ್ಸ್ ಕಂಪನಿಯು ಕೆಲಸದ ಸ್ಥಳದಲ್ಲಿ ಸುರಕ್ಷತೆ ಮತ್ತು ಆರೋಗ್ಯಕ್ಕೆ ಹೆಚ್ಚಿನದಾಗಿ ಒತ್ತು ನೀಡುತ್ತದೆ. ತೃತೀಯ ಪಕ್ಷಗಳು ಆರೋಗ್ಯ ಮತ್ತು ಸುರಕ್ಷತಾ ನಿರ್ವಹಣಾ ಕ್ರಮಗಳನ್ನು ತಮ್ಮ ಎಲ್ಲಾ ವ್ಯವಹಾರ ಕ್ಷೇತ್ರಗಳಲ್ಲಿ ಅಳವಡಿಸಬೇಕು. ಅವರು ಉದ್ಯೋಗ ಸುರಕ್ಷತೆ, ತುರ್ತು ಸಿದ್ಧತೆ, ಕೈಗಾರಿಕಾ ಸ್ವಚ್ಛತೆ, ಶಾರೀರಿಕ ಒತ್ತಡ, ಯಂತ್ರೋಪಕರಣಗಳ ಸುರಕ್ಷತೆ, ಶೌಚಾಲಯ, ಆಹಾರ ಮತ್ತು ವಸತಿ ಕ್ಷೇತ್ರಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನುಗಳನ್ನು ಪಾಲಿಸಬೇಕು. ಅಪಾಯಗಳನ್ನು ಗುರುತಿಸಿ, ಮೌಲ್ಯಮಾಪನ ಮಾಡಿ ಹಾಗು ಕಡಿಮೆ ಮಾಡುವ ಮೂಲಕ ಉದ್ಯೋಗಿಗಳು ಮತ್ತು ಭೇಟಿದಾರರ ಸುರಕ್ಷತೆಯನ್ನು ಖಚಿತ ಪಡಿಸಬೇಕು.

**ಹಣಕಾಸು ಪ್ರಾಮಾಣಿಕತೆ :**

ಎಲ್ಲಾ ತೃತೀಯ ಪಕ್ಷಗಳ ವ್ಯವಹಾರಗಳು, ರಚನೆ, ಹಣಕಾಸು ಪರಿಸ್ಥಿತಿ ಹಾಗು ಕಾರ್ಯಕ್ಷಮತೆ ಪಾರದರ್ಶಿಕವಾಗಿರಬೇಕು ಹಾಗು ನಿಖರವಾಗಿ ಅವರ ಲೆಕ್ಕಪತ್ರಗಳಲ್ಲಿ ದಾಖಲಾಗಿರಬೇಕು. ಪೇಚೆಕ್ಸ್ ಭ್ರಷ್ಟಾಚಾರ, ತಪ್ಪುಪ್ರಾತಿನಿಧಿಕ, ಬೆದರಿಕೆ, ದುರುಪಯೋಗ, ಲಂಚ ಈ ವಿಚಾರಗಳಲ್ಲಿ ಬಳಸುವ ಯಾವುದೇ ಅನೈತಿಕ ಕ್ರಮಗಳಿಗೆ ಶೂನ್ಯ-ಸಹನೆ ನೀತಿಯನ್ನು ನಿರೀಕ್ಷಿಸುತ್ತದೆ.

**ಸಂಘರ್ಷ ಖನಿಜಗಳು :**

ಪೇಚೆಕ್ಸ್ ಕಂಪನಿಗೆ ಸರಬರಾಜು ಮಾಡುವ ಎಲ್ಲಾ ಉತ್ಪನ್ನಗಳು ಹಾಗು ವಸ್ತುಗಳಲ್ಲಿ ಸಂಘರ್ಷ ಪ್ರದೇಶಗಳಿಂದ (ಕನ್ಫ್ಲಿಕ್ಟ್ ರೀಜನ್ಸ್) ಬಂದಿರುವ ಖನಿಜಗಳನ್ನು ಒಳಗೊಂಡಿರಬಾರದು. ಇವುಗಳು ಪ್ರತ್ಯಕ್ಷವಾಗಿ ಅಥವ ಪರೋಕ್ಷವಾಗಿ ಶಸ್ತ್ರಸಜ್ಜಿತ ಗುಂಪುಗಳಿಗೆ ಹಣಕಾಸನ್ನು ಒದಗಿಸುತ್ತವೆ.

**ರಫ್ತು ನಿಯಂತ್ರಣಗಳು :**

ತೃತೀಯ ಪಕ್ಷಗಳು ಎಲ್ಲಾ ಸಂಬಂಧಿತ ರಫ್ತು ನಿಯಂತ್ರಣ ಕಾನೂನುಗಳು ಮತ್ತು ನಿಯಮಗಳನ್ನು ಪಾಲಿಸಬೇಕು. ನಿಯಂತ್ರಿತ ವಸ್ತುಗಳು, ತಂತ್ರಜ್ಞಾನ ಮತ್ತು ಮಾಹಿತಿಯನ್ನು ನಿಷೇಧಿತ ಗುರಿಗಳ ಅಥವ ಬಳಕೆದಾರರಿಗೆ ವರ್ಗಾಯಿಸುವುದನ್ನು ತಡೆಯಬೇಕು.

**ವ್ಯಾಪಾರ ನಿಯಂತ್ರಣಗಳು :**

ಅಂತರರಾಷ್ಟ್ರೀಯ ವ್ಯಾಪಾರಿ ನಿಯಂತ್ರಣ ಕಾನೂನುಗಳು ಹಾಗು ದೇಶ-ನಿರ್ಧಿಷ್ಟ ವ್ಯಾಪಾರ ನಿರ್ಬಂಧಗಳು, ವಸ್ತುಗಳು, ಸೇವೆಗಳು, ತಂತ್ರಜ್ಞಾನ ಹಾಗು ಹಣಕಾಸು ವ್ಯವಹಾರಗಳಿಗೆ ಅನ್ವಯಿಸುತ್ತವೆ. ತೃತೀಯ ಪಕ್ಷಗಳು ಈ ನಿಯಮಗಳನ್ನು ಸಂಪೂರ್ಣವಾಗಿ ಅನುಸರಿಸಬೇಕು.

**ಪ್ರತೀಕಾರ ವಿರೋಧ :**

ಪೇಚೆಕ್ಸ್ ಕಂಪನಿಯು ನೈತಿಕತೆ, ಅನುಸರಣೆ ಹಾಗು ಇತರೆ ಸಂಬಂಧಿತ ವಿಷಯಗಳ ಬಗ್ಗೆ ಮುಕ್ತ ಸಂವಹನವನ್ನು ಉತ್ತೇಜಿಸುತ್ತದೆ. ಪೇಚೆಕ್ಸ್ ನೀತಿಗಳು, ಕಾನೂನುಗಳು ಅಥವ ವೃತ್ತಿಪರ ಮಾನದಂಡಗಳ ಉಲ್ಲಂಘನೆಗಳನ್ನು ವರದಿ ಮಾಡಿದವರ ಮೇಲೆ ಕಿರುಕುಳ, ಬೆದರಿಕೆ, ಬೇಧಭಾವ ಅಥವ ಪ್ರತೀಕಾರವನ್ನು ಅನುಮತಿಸಲಾಗುವುದಿಲ್ಲ.

**ವರದಿ ಅವಶ್ಯಕತೆಗಳು :**

ಪೇಚೆಕ್ಸ್ ತನ್ನ ತೃತೀಯ ಪಕ್ಷಗಳ ಪ್ರತಿನಿಧಿಗಳು ಈ ವರ್ತನೆ ಸಂಹಿತೆಯನ್ನು ಅರ್ಥ ಮಾಡಿಕೊಂಡು ಪಾಲಿಸುವಂತೆ ನಿರೀಕ್ಷಿಸುತ್ತದೆ. ಉಲ್ಲಂಘನೆಗಳು ಅಥವಾ ಸಂಶಯಾಸ್ಪದ ಉಲ್ಲಂಘನೆಗಳನ್ನು ಪೇಚೆಕ್ಸ್ ನ ಪ್ರಮುಖ ಸಂಪರ್ಕ ವ್ಯಕ್ತಿಗೆ, thirdpartyethich@paychex.com ಅಥವಾ ಗೌಪ್ಯ ತೃತೀಯ-ಪಕ್ಷ ಸೇವೆಯಿಂದ ನಿರ್ವಹಿಸಲ್ಪಡುವ ಟೋಲ್-ಫ್ರೀ ಸಂಖ್ಯೆ (1-855-753-0485) ಗೆ ವರದಿ ಮಾಡಬೇಕು.